ಪ್ರಮುಖವಾಗಿತ್ತು. ಊರೊಳಗಿನ ಪಂಚಾಯಿತಿ ಎಲೆಕ್ಷನ್ನಿಂದ ಹಿಡಿದು, ರಾಜ್ಯದ ಎಂ.ಎಲ್‌.ಎ, ಎಂ.ಪಿ ಎಲೆಕ್ಷನ್‌ವರೆಗೆ ಮಾತುಕತೆಗಳು, ಭಾಷಣಗಳು ಸೇರಿದಂತೆ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರಿಂದ, ಊರವರು ಮತ್ತು ತಾಲ್ಲೂಕಿನ ಜನ ಹಾಗೂ ಮೀಡಿಯಾದವರು ಅವರನ್ನು ಕರೆಯುತ್ತಿದ್ದದ್ದು 'ರಾಜಕೀಯ ಧುರೀಣರು' ಅಂತಲೇ.

ಮಹಾದೇವರ ಯಾವ ಆಸೆಗೂ ಅಡ್ಡಿ ಮಾಡದ ಮಹಾದೇವರ ಅಣ್ಣ ರಾಮಚಂದ್ರ, ಅವರ ಇಚ್ಚೆಯಂತೆ ಅವರ ಜೀವನ ಕಟ್ಟಿಕೊಳ್ಳಲು ಬಿಟ್ಟುಬಿಟ್ಟಿದ್ದರು. 'ಯಾರ್‍ಯಾರ ಹಣೆಯಲ್ಲಿ ಏನೇನು ಬರೆದಿದೆಯೋ ಪರಮಾತ್ಮನೇ ಬಲ್ಲ' ಎಂಬುದು, ಮಹಾದೇವರ ಮುಂದಿನ ಜೀವನ ಕುರಿತಂತೆ ರಾಮಚಂದ್ರರವರ ಮಾತಾಗಿತ್ತು. ಹಾಗಾಗಿ ಮಹಾದೇವರ ಆಸೆಗೆ ಅಡ್ಡಿಯಾಗದಂತೆ ಮಹಾದೇವರಿಗೆ ಆಸ್ತಿಪಾಸ್ತಿಯ, ತೋಟ ತುಡಿಕೆಯ, ಕೃಷಿಯ ಯಾವ ಜವಾಬ್ದಾರಿಯನ್ನು ಹೇಳದೆ ಅವರಿಚ್ಚೆಯಂತೆ ಅವರನ್ನು ಬಿಟ್ಟು ಬಿಟ್ಟಿದ್ದರು.

ತಾಲ್ಲೂಕಿನ ಅಭಿವೃದ್ಧಿ ಮತ್ತು ಜಿಲ್ಲೆಯ ಅಭಿವೃದ್ಧಿ ರಾಜಕಾರಣದಲ್ಲಿ ಸಕ್ರಿಯರಾಗಿ, ತಾಲ್ಲೂಕಿನ ಮತ್ತು ಜಿಲ್ಲೆಯ ಅಭಿವೃದ್ಧಿಗಾಗಿ ನೇರವಾಗಿ ಮಾತನಾಡುವ ಎದೆಗಾರಿಕೆಯ ಧ್ವನಿಯಾಗಿ ಮಹಾದೇವ, 'ಬೆಂಕಿ ಮಾದೇವ'ನೆಂದು ಹೆಸರುವಾಸಿಯಾಗಿದ್ದರು ಹಾಗೂ ಯಾವ ರಾಜಕೀಯ ಪಕ್ಷದಲ್ಲೂ ನೇರವಾಗಿ ಗುರುತಿಸಿಕೊಳ್ಳದ ಮಹಾದೇವ, ತಾನೇ ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದ್ದರು.

ಹೀಗೆ ರಾಜಕಾರಣದಲ್ಲಿ ಹೆಸರುವಾಸಿಯಾಗಿ ಆ ತಾಲ್ಲೂಕಿನ ಹಾಲಿ ಎಂ.ಎಲ್‌.ಎ, ಮಾಜಿ ಎಂ.ಎಲ್‌.ಎಗಳು, ಜಿಲ್ಲೆಯ ಎಂಪಿಗಳ ನೇರ ಸಂಪರ್ಕಕ್ಕೆ

